| 2022–23ನೇ ಸಾಲಿನ ಪ.ಜಾ./ಪ.ವ. ವಿದ್ಯಾರ್ಥಿಗಳ ವಿ.ವಿ. ಇ.ಬಿ.ಎಲ್. ವಿವರ | | | | |
|---|---|---|---|---|
| **Sl. No.** | **Hostel's Name** | **Total of Students** | | **Total Amount** |
| 1 | Post-Graduate Student's Hostel For Men, B-1, MGM | SC | 288 | 864000 |
| | | ST | 123 | 369000 |
| 2 | Post-Graduate Student's Hostel For Men, B-2, MGM | SC | 301 | 903000 |
| | | ST | 80 | 240000 |
| 3 | Post-Graduate Student's Hostel For Men, B-3, MGM | SC | 139 | 417000 |
| | | ST | 47 | 141000 |
| 4 | Post-Graduate Student's Hostel For Women, B-1, MGM | SC | 139 | 417000 |
| | | ST | 38 | 114000 |
| 5 | Post-Graduate Student's Hostel For Women, B-2, MGM | SC | 160 | 480000 |
| | | ST | 35 | 105000 |
| 6 | Post-Graduate Student's Hostel For Women, B-3, MGM | SC | 111 | 1015122 |
| | | ST | 26 | 195470 |
| 7 | Physical Education Men Hostel, Mysuru | SC | 15 | 148610 |
| | | ST | 4 | 29563 |
| 8 | Physical Education Women Hostel, Mysuru | SC | 0 | 0 |
| | | ST | 0 | 0 |
| **Total of Students Numbers & Amount** | | | **1506** | **5438765** |

Sd/- (I/c)

DIRECTOR OF STUDENT WELFARE
UNIVERSITY OF MYSORE, MYSURU

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ, ಕ್ರಾಫರ್ಡ್ ಭವನ, ಮೈಸೂರು – 570 005

website : www.uni-mysore.ac.in

**ವಿಷಯ:** 2022–23ನೇ ಶೈಕ್ಷಣಿಕ ಸಾಲಿಗೆ ವಿ.ವಿ. ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ಪಡೆದಿರುವ ಪ.ಜಾ./ಪ.ವ. ವಿದ್ಯಾರ್ಥಿಗಳ ಭೋಜನ ಶುಲ್ಕ ಮತ್ತು ವಿ.ವಿ. ಇ.ಬಿ.ಎಲ್. ಹುಂಡಿಗಳನ್ನು ಸಲ್ಲಿಸುವ ಬಗ್ಗೆ.

**ಉಲ್ಲೇಖ:** ದಿನಾಂಕ: 12–08–2022ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ 2022–23ನೇ ಶೈಕ್ಷಣಿಕ ಸಾಲಿನ 'ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿ'ಯ ಮೊದಲನೇ ಸಭೆಯ ತೀರ್ಮಾನ.

**ಪ್ರಸ್ತಾವನೆ:** ಮೈಸೂರು ವಿಶ್ವವಿದ್ಯಾನಿಲಯದ ಮೈಸೂರು ನಗರ ವ್ಯಾಪ್ತಿಯಲ್ಲಿರುವ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿ ವಾಸವಿರುವ ಪ.ಜಾ./ಪ.ವ. ವಿದ್ಯಾರ್ಥಿಗಳಿಗೆ ಶಿಕ್ಷಕ ಸಲಹೆಗಾರರ ನೇತೃತ್ವದಲ್ಲಿ ನಡೆಯುವ ಭೋಜನದ ವ್ಯವಸ್ಥೆಗೆ ಪ.ಜಾ./ಪ.ವ. (ವಿದ್ಯಾರ್ಥಿ ವೇತನಕ್ಕೆ ಅರ್ಹರಾದ) ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದಿಂದ ಮಂಜೂರಾಗುವ ವಿದ್ಯಾರ್ಥಿವೇತನ ಹಾಗೂ ಕರ್ನಾಟಕ ಸರ್ಕಾರದಿಂದ ಮಂಜೂರಾಗುವ ಅಧಿಕ ಭೋಜನ ವೆಚ್ಚ ದಿನಾಂಕವಾರು ಹಾಗೂ ವಿಷಯವಾರು ಅನ್ವಯವಾಗುವಂತೆ, ಎರಡು ಸೇರಿ ಒಬ್ಬ ವಿದ್ಯಾರ್ಥಿಗೆ ಮಾಹೆಯಾನ ರೂ. 1,600/- ಗಳಂತೆ ಹಾಗೂ ವಿಶ್ವವಿದ್ಯಾನಿಲಯದ ವತಿಯಿಂದ ನೀಡುವ ವಿ.ವಿ. ಇ.ಬಿ.ಎಲ್. ರೂ. 300/-ಗಳಂತೆ ಒಟ್ಟು ರೂ. 1,900/-ಗಳಲ್ಲಿ ಕಲ್ಪಿಸಲಾಗುವ ಭೋಜನ ವ್ಯವಸ್ಥೆಗೆ ಸಂಬಂಧಿಸಿದ ಮೊತ್ತಗಳಿಗೆ ಆಯಾಯ ನಿಲಯಗಳ ಶಿಕ್ಷಕ ಸಲಹೆಗಾರರುಗಳು ನಿಲಯದ ಪ.ಜಾ./ಪ.ವ. ವಿದ್ಯಾರ್ಥಿಗಳಿಂದ ಪ್ರತಿ ಮಾಹೆಯಾನ ಹಾಜರಾತಿ ಸಹಿಯನ್ನು ಪಡೆದು, ಡಿ.ಸಿ. ಹುಂಡಿಯನ್ನು ದ್ವಿಪ್ರತಿಯಲ್ಲಿ ಸಿದ್ಧಪಡಿಸಿ, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು ಇವರ ಮೇಲುಸಹಿಯೊಂದಿಗೆ ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಸಲ್ಲಿಸತಕ್ಕದ್ದು.

ಒಂದು ವೇಳೆ ನಿಲಯಾರ್ಥಿಗಳಿಗೆ ಭಾರತ ಸರ್ಕಾರದ ವಿದ್ಯಾರ್ಥಿವೇತನ ಮತ್ತು ಕರ್ನಾಟಕ ಸರ್ಕಾರದ ಅಧಿಕ ಭೋಜನ ವೆಚ್ಚವು ಮಂಜೂರಾಗಲು ತಡವಾದಲ್ಲಿ ಅಥವಾ ನೇರವಾಗಿ ಸಂಬಂಧಿಸಿದ ವಿದ್ಯಾರ್ಥಿಗಳ ಖಾತೆಗೆ ಸರ್ಕಾರದಿಂದ ಜಮಾಗೊಂಡಲ್ಲಿ ಅಂತಹ ವಿದ್ಯಾರ್ಥಿಗಳಿಂದ ನಿಯಮಾನುಸಾರ ಪಾವತಿಯಾಗಬೇಕಾದ ವಿವಿಧ ಶುಲ್ಕವನ್ನು ಪಾವತಿಸಿಕೊಂಡು ಆಯಾಯ ವಿದ್ಯಾರ್ಥಿನಿಲಯಗಳಿಂದ ಬೇಬಾಕಿ ಪತ್ರವನ್ನು ನೀಡತಕ್ಕದ್ದು.

ಸರ್ಕಾರದಿಂದ ವಿದ್ಯಾರ್ಥಿವೇತನ ಮತ್ತು ಅಧಿಕ ಭೋಜನ ವೆಚ್ಚ ಮಂಜೂರಾದ ತಕ್ಷಣ ನಿಲಯದ ಶಿಕ್ಷಕ ಸಲಹೆಗಾರರು ಬಟವಾಡೆ ಪುಸ್ತಕದಲ್ಲಿ ನಿಲಯಾರ್ಥಿಗಳ ದಾಖಲಾತಿಗಳನ್ನು ಪರಿಶೀಲಿಸಿ, ಸದರಿ ಮೊತ್ತಗಳನ್ನು ಹಣಕಾಸು ವಿಭಾಗವು ನಿರ್ವಹಿಸುವ **ಮೈಸೂರು ವಿಶ್ವವಿದ್ಯಾನಿಲಯದ ಖಾತೆ ಸಂಖ್ಯೆ: 54007591471ಕ್ಕೆ (ಜಿ.ಆರ್.ಎ. ಖಾತೆ)** ಜಮಾ ಮಾಡಲು ದಿನಾಂಕ: 12–08–2022ರ 2022–23ನೇ ಶೈಕ್ಷಣಿಕ ಸಾಲಿನ ಸಲಹಾ ಸಮಿತಿಯಲ್ಲಿ ತೀರ್ಮಾನವಾಗಿರುವುದನ್ನು ಮಾನ್ಯ ಕುಲಪತಿಗಳು ಅನುಮೋದಿಸಿರುವುದರಿಂದ ಈ ಆದೇಶ.

*****

**ವಿ.ವಿ. ಆದೇಶ ಸಂಖ್ಯೆ: ವಿ.ಕ್ಷೇ.ಪಾ.8/06/1005/2021-22 ದಿನಾಂಕ: 17-09-2022**

ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ, ದಿನಾಂಕ: 12–08–2022ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ 2022–23ನೇ ಶೈಕ್ಷಣಿಕ ಸಾಲಿನ 'ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿ'ಯ ಮೊದಲನೇ ಸಭೆಯ ತೀರ್ಮಾನದಂತೆ ಹಾಗೂ ಸಿಂಡಿಕೇಟ್

ಸಭೆಯ ನಿರ್ಣಯವನ್ನು ಕಾಯ್ದಿರಿಸಿ, ಮೈಸೂರು ನಗರ ವ್ಯಾಪ್ತಿಯಲ್ಲಿರುವ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿ ಶಿಕ್ಷಕ ಸಲಹೆಗಾರರ ನೇತೃತ್ವದಲ್ಲಿ ನಡೆಯುವ ಭೋಜನ ವ್ಯವಸ್ಥೆಗೆ ಸಂಬಂಧಿಸಿದಂತೆ, 2021-22ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿನಿಲಯಗಳ ಶಿಕ್ಷಕ ಸಲಹೆಗಾರರು ಪ.ಜಾ./ಪ.ವ. ವಿದ್ಯಾರ್ಥಿಗಳ ಆಯಾಯ ತಿಂಗಳ ಭೋಜನ ವೆಚ್ಚದ ವಿವರಗಳನ್ನು ವಿದ್ಯಾರ್ಥಿಗಳ ಹಾಜರಾತಿಯ ಸಹಿಯೊಂದಿಗೆ ಒಬ್ಬ ವಿದ್ಯಾರ್ಥಿಗೆ ಮಾಹೆಯಾನ ರೂ. 1,600/- ಹಾಗೂ ವಿಶ್ವವಿದ್ಯಾನಿಲಯದ ವತಿಯಿಂದ ನೀಡುವ ವಿ.ವಿ. ಇ.ಬಿ.ಎಲ್. ರೂ. 300/- ಒಟ್ಟು ರೂ. 1,900/- ಗಳಂತೆ, ಡಿ.ಸಿ. ಹುಂಡಿಯನ್ನು ಸಿದ್ಧಪಡಿಸಿ, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು ಇವರ ಮೇಲುಸಹಿಯೊಂದಿಗೆ ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಸಲ್ಲಿಸಲು ಅನುಮತಿಯನ್ನು ನೀಡಿದೆ.

ನಿಲಯಾರ್ಥಿಗಳಿಗೆ ಭಾರತ ಸರ್ಕಾರದ ವಿದ್ಯಾರ್ಥಿವೇತನ ಮತ್ತು ಕರ್ನಾಟಕ ಸರ್ಕಾರದ ಅಧಿಕ ಭೋಜನ ವೆಚ್ಚವು ಮಂಜೂರಾಗಲು ತಡವಾದ್ದಲ್ಲಿ ಅಥವಾ ನೇರವಾಗಿ ಸಂಬಂಧಿಸಿದ ವಿದ್ಯಾರ್ಥಿಗಳ ಖಾತೆಗೆ ಸರ್ಕಾರದಿಂದ ಜಮಾಗೊಂಡಲ್ಲಿ ಅಂತಹ ವಿದ್ಯಾರ್ಥಿಗಳಿಂದ ನಿಯಮಾನುಸಾರ ಪಾವತಿಯಾಗಬೇಕಾದ ವಿವಿಧ ಶುಲ್ಕವನ್ನು ಪಾವತಿಸಿಕೊಂಡು ಬೇಬಾಕಿ ಪತ್ರವನ್ನು ನೀಡಲು ಮತ್ತು ಸರ್ಕಾರದಿಂದ ವಿದ್ಯಾರ್ಥಿವೇತನ ಮತ್ತು ಅಧಿಕ ಭೋಜನ ವೆಚ್ಚ ಮಂಜೂರಾದ ತಕ್ಷಣ ನಿಲಯದ ಶಿಕ್ಷಕ ಸಲಹೆಗಾರರು ಬಟವಾಡೆ ಪುಸ್ತಕದಲ್ಲಿ ನಿಲಯಾರ್ಥಿಗಳ ದಾಖಲಾತಿಗಳನ್ನು ಪರಿಶೀಲಿಸಿ, ಸದರಿ ಮೊತ್ತಗಳನ್ನು ಹಣಕಾಸು ವಿಭಾಗವು ನಿರ್ವಹಿಸುವ **ಮೈಸೂರು ವಿಶ್ವವಿದ್ಯಾನಿಲಯದ ಖಾತೆ ಸಂಖ್ಯೆ: 54007591471ಕ್ಕೆ (ಜಿ.ಆರ್.ಎ. ಖಾತೆ)** ಜಮಾ ಮಾಡಲು ಆದೇಶಿಸಿದೆ.

ಆದೇಶದ ಮೇರೆಗೆ,

ಕುಲಸಚಿವ

ಇವರಿಗೆ:

1. ಶಿಕ್ಷಕ ಸಲಹೆಗಾರರು, ಮೈಸೂರು ನಗರ ವ್ಯಾಪ್ತಿಗೊಳಪಡುವ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳು, ಮೈಸೂರು
2. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
3. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು
4. ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಪ್ರಾಂತೀಯ (ವಿಭಾಗೀಯ) ಕಚೇರಿ, ಮೈಸೂರು ವಿಭಾಗ, ಮೈಸೂರು
5. ಮಾನ್ಯ ಕುಲಪತಿಗಳ/ ಕುಲಸಚಿವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
6. ಕಚೇರಿ ಪ್ರತಿ